ಉದಯವಾಣಿ
ಜನಮನದ ಜೀವನಾಡಿ

**Wednesday 04th January 2018**

## MTech Programmes: 31 Ranks to RVCE

# ದಯಾನಂದ ಸಾಗರ ಕಾಲೇಜಿಗೆ 48 ರ್‍ಯಾಂಕ್

**ಬೆಳಗಾವಿ:** ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಈ ಬಾರಿ ಬೆಂಗಳೂರಿನ ದಯಾನಂದ ಸಾಗರ ಕಾಲೇಜು ಅತಿ ಹೆಚ್ಚು ರ್‍ಯಾಂಕ್ ಗಳಿಸುವ ಮೂಲಕ ಪ್ರಾಬಲ್ಯ ಮೆರೆದಿದ್ದು, ಬಿಇ, ಬಿ.ಟೆಕ್‌ನಲ್ಲಿ ಒಟ್ಟು 48 ರ್‍ಯಾಂಕ್ ಪಡೆದುಕೊಂಡಿದೆ. ಇದರೊಂದಿಗೆ ನಗರದ ಆಚಾರ್ಯ ಇನ್‌ಸ್ಟಿಟ್ಯೂಟ್ 19, ಬಿಐಟಿ 18, ಎಂವಿಜೆ ಮಹಾವಿದ್ಯಾಲಯಗಳು 10 ರ್‍ಯಾಂಕ್ ಗಳಿಸಿವೆ. ಬಿ.ಆರ್ಕ್‌ನಲ್ಲಿ ಬೆಂಗಳೂರಿನ ದಯಾನಂದ ಸಾಗರ ಕಾಲೇಜು 5, ಆಕ್ಸ್‌ಫರ್ಡ್ ಬಿಎಂಎಸ್ ಒಂದು ರ್‍ಯಾಂಕ್ ಗಳಿಸಿದೆ. ಎಂಬಿಎದಲ್ಲಿ ಬೆಂಗಳೂರಿನ ಆರ್‌ಎನ್‌ಎಸ್ 5, ಡಾ. ಅಂಬೇಡ್ಕರ್ ಕಾಲೇಜು, ಎಸ್‌ಜೆಬಿಐಟಿ, ಚಿಕ್ಕಬಳ್ಳಾಪುರದ ಎಸ್‌ಜೆಸಿಐಟಿ ಒಂದು ರ್‍ಯಾಂಕ್ ಪಡೆದುಕೊಂಡಿವೆ. ಎಂಸಿಎದಲ್ಲಿ ನಗರದ ನ್ಯೂ ಹಾರಿಜಾನ್ ಕಾಲೇಜು 2, ಆರ್‌ವಿಸಿಇ, ಆರ್‌ಎನ್‌ಎಸ್, ಡಿಎಸ್‌ಸಿಇ ಮತ್ತು ಆಕ್ಸ್‌ಫರ್ಡ್ ಕಾಲೇಜುಗಳು ತಲಾ 1 ರ್‍ಯಾಂಕ್ ಪಡೆದಿವೆ. ಇನ್ನು ಎಂ.ಟೆಕ್‌ನಲ್ಲಿ ಆರ್‌ವಿಸಿಇ 31, ಬಿಎಂಎಸ್‌ಸಿಇ 15, ವಿಟಿಯು ಸ್ನಾತಕೋತ್ತರ ಕೇಂದ್ರ 12, ಬಿಐಟಿ 8 ರ್‍ಯಾಂಕ್ ಗಳಿಸಿವೆ. ಎಂ.ಆರ್ಕ್‌ನಲ್ಲಿ ಆರ್‌ವಿ ಕಾಲೇಜು 3 ರ್‍ಯಾಂಕ್ ತನ್ನದಾಗಿಸಿಕೊಂಡಿದೆ.